

ಆ ಸಣ್ಣ ವಯಸ್ಸಲ್ಲಿ ಮೋತಿ ಬೀದಿ ಅಲೆದುಕೊಂಡು ಬೆಳೆದು ದೊಡ್ಡದಾಯಿತು.

ಆದರೆ, ನಮ್ಮ ಮೋತಿಗೆ ಒಮ್ಮೆ ದೆಸೆಯುಕ್ಕಿತು. ಬಾಗಾಳ್ ಕಟ್ಟೆ ಊರಿನಲ್ಲಿ ಜಾಗವೊಂದನ್ನು ಕೊಂಡು ಸಣ್ಣ ಮನೆ ಕಟ್ಟಿಕೊಂಡು ಸಂಸಾರವೊಂದು ವಾಸ ಮಾಡತೊಡಗಿತು. ಆ ಮನೆಯಲ್ಲಿ ಇಬ್ಬರು ಮಕ್ಕಳೂ ಇದ್ದರು. ಮಕ್ಕಳಿಗೆ ಮೋತಿ ತುಂಬಾ ಇಷ್ಟವಾಯಿತು. ಬಾಯಿಗೆ ಬೆರಳಿಟ್ಟರೂ ಕಚ್ಚದ ಮೋತಿಯೊಡನೆ ದಿನವೂ ಆಟವಾಡತೊಡಗಿದರು. ಮನೆಯ ಯಜಮಾನ 'ಅದು ಹೆಣ್ಣು ನಾಯಿ, ಬೇಡ' ಎಂದೆಲ್ಲ ಹೇಳಿದರೂ ಕೇಳದೆ ಆ ಮಕ್ಕಳು ಹಟ ಮಾಡಿ ತಮ್ಮ ಮನೆಯಲ್ಲಿಯೇ ಮೋತಿಯನ್ನು ಉಳಿಸಿಕೊಂಡರು. 'ನಿಸರ್ಗ' ಎಂಬ ಹೆಸರಿನ ಆ ಮನೆ ಮೋತಿಯ ಕಾಯಂ ಮನೆಯಾಯಿತು. ಆ ಮನೆಯೊಡತಿಯೂ ಧಾರಾಳವಾಗಿ ಅನ್ನ, ಹಾಲು, ಮೀನು, ಮಾಂಸ ಹಾಕಿ ಮೋತಿಯನ್ನು ನೋಡಿ ಕೊಂಡರು. ಹೇಳಲು ಮರೆತ ವಿಷಯವೆಂದರೆ ಮೋತಿಗೆ ಈಗ ಬೇರೆ ಹೆಸರೂ ಬಂದಿತ್ತು! ಯಾಕೆಂದರೆ, ಆ ಮನೆಯವರು ಊರಿಗೆ ಹೊಸಬರಾದ್ದರಿಂದ ಅವರಿಗೆ ಮೋತಿಯ ಹೆಸರು ಗೊತ್ತಿರಲಿಲ್ಲ. ತನ್ನ ಹೆಸರು ಇಂಥಾದ್ದೆಂದು ಹೇಳಲು ಮೋತಿಗೂ ತಿಳಿದಿರಲಿಲ್ಲ! ಒಟ್ಟಿನಲ್ಲಿ 'ನಿಸರ್ಗ' ಮನೆಯಲ್ಲಿ ಮೋತಿಯನ್ನು 'ದಾಸು' ಎಂದು ಕರೆದರು. ಬಿಳಿಯ ಮೈಮೇಲೆ ಕಪ್ಪು ಹಚ್ಚೆಗಳಿದ್ದ ನಾಯಿಯಾದ್ದರಿಂದ ಅದನ್ನು ಹಾಗೆ ಕರೆದದ್ದಿರಬೇಕು. ಸರಿ, ಮೋತಿ ಅಲಿಯಾಸ್ ದಾಸು ಹಿಂದೆಂದೂ ಕಾಣದ ಊಟ, ಮುದ್ದು, ಪ್ರೀತಿಯೊಂದಿಗೆ ಖುಷಿಯಿಂದ ಕಾಲ ಕಳೆಯಿತು. ಒಮ್ಮೆ ಮನೆಯೊಳಗೆ ನುಗ್ಗಲು ಬಂದ ಹಂಯ್ಯಾರ (ಕೇರೆ) ಹಾವನ್ನು ಓಡಿಸಿದ ಮೇಲಂತೂ ದಾಸುವಿನ ಮೇಲೆ ಮನೆಯವರೆಲ್ಲರ ಪ್ರೀತಿ ಇಮ್ಮಡಿಯಾಯಿತು!

ಒಂದು ದಿನ ಏನಾಯಿತೆಂದರೆ 'ನಿಸರ್ಗ' ಮನೆಯ ಬೆಕ್ಕು 'ಬೆಳ್ಳಿ'ಯನ್ನು ಆ ಊರಿನ ದೊಡ್ಡ ನಾಯಿಯೊಂದು ಹಿಡಿದು ಹಾಕಿತು. ಮನೆಯ ಅಂಗಳದಲ್ಲೇ ಬೆಳ್ಳಿಬೆಕ್ಕು ಒದ್ದಾಡಿ ಪ್ರಾಣ ಬಿಟ್ಟಿತು. ಮನೆಯವರೆಲ್ಲ ಶೋಕದ ಕಡಲಿಗೆ ಬಿದ್ದರು. ಮನೆ ಮಕ್ಕಳಂತೂ ಅಂಗಳದಲ್ಲಿ ಎದೆ ಬಡಿದುಕೊಂಡು ಅತ್ತವು. ದಾಸುಗೂ ತನ್ನ ಗೆಳತಿ ಬೆಳ್ಳಿ ಸತ್ತದ್ದು ಬಹಳ ಬೇಜಾರಾಯಿತು. ಆದರೆ, ಮರುದಿನ ಮನೆಯ ಯಜಮಾನರು ಒಂದು ತೀರ್ಮಾನ ತೆಗೆದುಕೊಂಡರು. ದಾಸು ಹೆಣ್ಣು ನಾಯಿಯಾದ್ದರಿಂದಲೇ ಬೇರೆ ಗಂಡು ನಾಯಿಗಳು ಮನೆ ಹತ್ತಿರ ಬರುವುದು. ಹಾಗೆ ಬಂದ ನಾಯಿ ಬೆಳ್ಳಿಬೆಕ್ಕನ್ನು ಕೊಂದಿತು. ಇನ್ನು ನಾವು ಯಾವ ಬೆಕ್ಕಿನ ಮರಿ ತಂದರೂ ಅದನ್ನು ನಾಯಿಗಳು ಸಾಯಿಸುತ್ತವೆ. ಹಾಗಾಗಿ, ಈ ಎಲ್ಲ ಸಮಸ್ಯೆಗಳ ಮೂಲವಾದ ದಾಸುವನ್ನು ಗಡಿಪಾರು ಮಾಡಬೇಕೆಂದು ನಿರ್ಣಯಿಸಿದರು! ಮಕ್ಕಳು ಎಷ್ಟು ಹೇಳಿದರೂ ಕೇಳದೆ ಕಾರಿನ ಡಿಕ್ಕಿಯೊಳಗೆ